# ಕನ್ನಡ ರಾಜ್ಯೋತ್ಸವದ ವರದಿ

ಪ್ರತಿ ಕನ್ನಡಿಗನ ಕರುನಾಡ ಅಭಿಮಾನವಾದ ಕನ್ನಡ ರಾಜ್ಯೋತ್ಸವವನ್ನು ಆರ್.ಬಿ.ಎ.ಎನ್.ಎಂ.ಎಸ್ ಪ್ರಥಮದರ್ಜೆ ಕಾಲೇಜಿನಲ್ಲಿ ದಿನಾಂಕ: ೦೧/೧೧/೨೦೨೨ ಮಂಗಳವಾರದಂದು ಬೆಳಿಗ್ಗೆ ೯:೦೦ ಗಂಟೆಗೆ ನೆರವೇರಿಸಲಾಯಿತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಆಡಳಿತಾಧಿಕಾರಿಗಳಾದ ಡಾ.ವೀರಭದ್ರಪ್ಪನವರು ರಾಜ್ಯೋತ್ಸವವನ್ನು ಕುರಿತಂತೆ ಕನ್ನಡ ನಾಡು-ನುಡಿ ಪರಂಪರೆಯನ್ನು ಸವಿಸ್ತಾರವಾಗಿ ತಿಳಿಸಿದರು. ಕನ್ನಡ ಭಾಷೆಯು ಶಾಸ್ತ್ರೀಯ ಭಾಷೆಗಳಲ್ಲೊಂದು ಮಹತ್ತರ ಸ್ಥಾನ ಪಡೆದುಕೊಂಡಿದೆ. ವಿದ್ಯಾರ್ಥಿಗಳು ಅನ್ಯಭಾಷಿಕರಾಗಿದ್ದರೂ, ಕನ್ನಡನಾಡಿನಲ್ಲಿ ನೆಲೆಸಿರುವ ಕೃತಜ್ಞತೆಯಿಂದ ಹಾಗೂ ಪರೀಕ್ಷೆಯ ದೃಷ್ಟಿಯಿಂದ ಕನ್ನಡ ಓದುವುದು, ಮಾತನಾಡುವುದು, ಬರೆಯುವುದು ಕಲಿಯುವುದು ಕರ್ತವ್ಯವಾಗಿದೆ ಎಂಬ ಭಾವನಾತ್ಮಕ ನುಡಿಗಳನ್ನು ಹಂಚಿಕೊಂಡರು. ನಂತರ ನಾಡಗೀತೆ ಹಾಗೂ ರಾಷ್ಟ್ರಗೀತೆ ಸಾಮೂಹಿಕವಾಗಿ ಹಾಡಲಾಯಿತು. ವಿದ್ಯಾರ್ಥಿಗಳಿಗೆ ಆರ್.ಬಿ.ಎ.ಎನ್.ಎಂ.ಎಸ್ ನಿರ್ವಹಣಾ ಮಂಡಳಿಯು ಸಿಹಿ ತಿಂಡಿಯ ಜೊತೆ ಲಘು ಉಪಹಾರವನ್ನು ಏರ್ಪಡಿಸಿದ್ದರು. ನಾಡು-ನುಡಿಯ ಬಗ್ಗೆ ಹೆಮ್ಮೆ ಗೌರವ, ಅಭಿಮಾನಗಳ ಮೂಲಕ ಕನ್ನಡ ರಾಜ್ಯೋತ್ಸವವನ್ನುಅರ್ಥಪೂರ್ಣವಾಗಿ ಆಚರಿಸಲಾಯಿತು.

ಪ್ರಾಚಾರ್ಯರು

ಆರ್.ಬಿ.ಎ.ಎನ್.ಎಂ.ಎಸ್ ಪ್ರಥಮದರ್ಜೆ ಕಾಲೇಜು

ಕೋಟಿ ಕಂಠ ಗಾಯನ ಕಾರ್ಯಕ್ರಮದ ವರದಿ

ನಮ್ಮ ನಾಡು-ನುಡಿಯ ಬಗ್ಗೆ ಅಭಿಮಾನ ಮತ್ತು ನಮ್ಮ ಪರಂಪರೆಯ ಬಗ್ಗೆ ಗೌರವ ಮೂಡಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕನ್ನಡ ರಾಜ್ಯೋತ್ಸವದ ಅಂಗವಾಗಿ ಅಕ್ಟೋಬರ್ ೨೮ ಬೆಳಿಗ್ಗೆ ೧೧:೦೦ ಗಂಟೆಗೆ "ಕೋಟಿ ಕಂಠ ಗಾಯನ" ಕಾರ್ಯಕ್ರಮವನ್ನು ಕಂಠೀರವ ಕ್ರೀಡಾಂಗಣದಲ್ಲಿ ಆಯೋಜಿಸಿದ್ದು, ಸರ್ಕಾರದ ಆದೇಶದಂತೆ ಆರ್.ಬಿ.ಎ.ಎನ್.ಎಂ.ಎಸ್ ಪ್ರಥಮದರ್ಜೆ ಕಾಲೇಜು ದಿನಾಂಕ: ೨೮/೧೦/೨೦೨೨ ರಂದು ಸು ೬೦ ವಿದ್ಯಾರ್ಥಿಗಳು ಹೆಸರನ್ನು ನೊಂದಾಯಿಸಿ, ಸರ್ಕಾರದಿಂದ ನಿಯೋಜಿತವಾಗಿದ್ದ ಬಿ.ಎಂ.ಟಿ.ಸಿ ಬಸ್ಸಿನ ಮೂಲಕ ಕರೆದೊಯ್ಯಲಾಯಿತು. ಭಾಗವಹಿಸಿದ್ದ ವಿದ್ಯಾರ್ಥಿಗಳಿಗೆಲ್ಲಾ ಉಪಹಾರದ ವ್ಯವಸ್ಥೆ ಮಾಡಲಾಗಿತ್ತು.

ಕಾರ್ಯಕ್ರಮದಲ್ಲಿ ರಾಜ್ಯದ ಮುಖ್ಯಮಂತ್ರಿ ಶ್ರೀ ಬಸವರಾಜ್ ಬೊಮ್ಮಾಯಿಯವರು ಹಾಗೂ ಅನೇಕ ಗಣ್ಯರು ಉಪಸ್ಥಿತರಾಗಿದ್ದರು. ಸು.೧೧:೦೦ ಗಂಟೆಗೆ ಕಾರ್ಯಕ್ರಮ ಆರಂಭಿಸಿದರು. ಸು.೨೫೦೦೦ಕ್ಕೂ ಹೆಚ್ಚು ವಿದ್ಯಾರ್ಥಿಗಳ ಸಮೂಹದಿಂದ ತುಂಬಿಕೊಂಡಿದ್ದ ಕ್ರೀಡಾಂಗಣವು ನಾಡು-ನುಡಿ ಶ್ರೇಷ್ಠತೆ ಸಾರುವ 'ನಾಡಗೀತೆ' , ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು, ಬಾರಿಸು ಕನ್ನಡ ಡಿಂಡಿಮವ, ಹಚ್ಚೇವು ಕನ್ನಡದ ದೀಪ, ವಿಶ್ವ ವಿನೂತನ ವಿದ್ಯಾಚೇತನ, ಹುಟ್ಟಿದರೆ ಕನ್ನಡನಾಡಿನಲ್ಲಿ ಹುಟ್ಟಬೇಕು ಹಾಡುಗಳನ್ನು ಸಾಮೂಹಿಕವಾಗಿ ಹಾಡಲಾಯಿತು. ಸಂಕಲ್ಪವಿಧಿಯ ನಂತರ ನಾಡು-ನುಡಿ ಸಂಭ್ರಮದ ಬಗ್ಗೆ ಭಾಷಣ ಮಾಡಿದ ಮುಖ್ಯಮಂತ್ರಿಗಳು ಪುನೀತರಾಜ್ ಕುಮಾರ್‌ರವರಿಗೆ ಕರ್ನಾಟಕ ರತ್ನ ಪ್ರಶಸ್ತಿ ನೀಡುವ ಬಗ್ಗೆ ಘೋಷಿಸಿದರು. ನಂತರ ವಿದ್ಯಾರ್ಥಿಗಳು ಕಾಲೇಜಿಗೆ ಹಿಂದುರುಗಲಾಯಿತು.

ಕಾಲೇಜಿನಲ್ಲಿ ಅದೇ ದಿನ ಪ್ರಾಂಶುಪಾಲರ ಸಮ್ಮುಖದಲ್ಲಿ ಇನ್ನುಳಿದ ವಿದ್ಯಾರ್ಥಿಗಳೊಂದಿಗೆ, ಬೋಧಕರು ಈ ಕೋಟಿಕಂಠಗಾಯನದ ಹಾಡುಗಳನ್ನು ಹಾಡಲಾಗಿತ್ತು.

ಪ್ರಾಂಶುಪಾಲರು